ಪ್ರಬಂಧ

# ರಿಪೇರಿ



**ಸಂಪತ್ ಸಿರಿಮನೆ**

ಕಲೆ: ಮುರಳೀಧರ್ ರಾಥೋಡ್

ರಿಪೇರಿ ಎನ್ನುವ ಪದ ಅದೆಷ್ಟು ಆಹ್ಲಾದಕರ! ಟೀವಿಯಲ್ಲಿ ಚುಕ್ಕಿಗಳು ಬಂದಾಗ, ಮೊಬೈಲು ಚಾರ್ಜ್ ಆಗದೇ ಇದ್ದಾಗ, ಇಸ್ತ್ರಿ ಪೆಟ್ಟಿಗೆ ಬಿಸಿಯಾಗಲು ನಿರಾಕರಿಸಿದಾಗ, ಬೈಕಿನ ಎಂಜಿನ್ ಸದ್ದು ಮಾಡಲು ಶುರು ಮಾಡಿದಾಗ, ಮನೆಯ ಮಿಕ್ಸಿ ರುಬ್ಬಲು ಹಟ ಮಾಡಿದಾಗ, ಮಳೆಗಾಲದಲ್ಲಿ ಮನೆಯ ಹಂಚು ಸೋರಲು ಶುರು ಮಾಡಿದಾಗ ಹೀಗೆ ಒಬ್ಬ ಮಾಮೂಲಿ ಮನುಷ್ಯನ ಜಂಘಾಬಲವನ್ನು ಉಡುಗಿಸುವಂತಹ ಎಲ್ಲಾ ಘಟನೆಗಳು ಜರುಗಿದಾಗಲೂ ಅತ್ತ ಒಂದು ಸುಲಭದ ಪರಿಹಾರ ಬಾಗಿಲಿನಲ್ಲಿ ಕುಳಿತಿರುತ್ತದೆ, ಅದೇ ದುರಸ್ತಿ. ವಸ್ತುಗಳು ಯಾವ ಸಮಯದಲ್ಲಿ, ಯಾವ ರೀತಿಯಲ್ಲಾದರೂ ಕೈಕೊಡಲಿ, ಯಾರೋ ಒಬ್ಬರು ಅದನ್ನು ರಿಪೇರಿ ಮಾಡಿ ವಾಪಸ್ ಮುಂಚಿನ ಸ್ಥಿತಿಯಲ್ಲಿಯೇ ನಮ್ಮ ಮುಂದಿಡುತ್ತಾರೆ ಎಂಬ ವಿಷಯಕ್ಕಿಂತ ಅತೀವ ನೆಮ್ಮದಿ ನೀಡುವ ವಿಷಯ ಆಧುನಿಕ ಜಗತ್ತಿನಲ್ಲಿ ಬೇರೆ ಯಾವುದಾದರೂ ಇರಲು ಸಾಧ್ಯವೇ?!. ಬೈಕೊಂದು ತಯಾರಾದರೆ ಜೊತೆಯಲ್ಲೇ ಮೆಕ್ಯಾನಿಕ್ ಒಬ್ಬ ಹುಟ್ಟುತ್ತಾನೆ, ಮೊಬೈಲ್ ಶೋರೂಮುಗಳ ಜೊತೆಗೇ ಸರ್ವಿಸ್ ಸೆಂಟರುಗಳೂ ಜನ್ಮ ತಾಳುತ್ತವೆ, ಬಲ್ಬೊಂದು ಬೆಳಕು ಬೀರಿದರೆ ಜೊತೆಯಲ್ಲೇ ಒಬ್ಬ ಎಲೆಕ್ಟ್ರಿಷಿಯನ್ ಕೂಡಾ ಬೆಳಕಿಗೆ ಬಂದಿರುತ್ತಾನೆ. ವಸ್ತುಗಳು ಮತ್ತು ರಿಪೇರಿಯ ಸಂಬಂಧ ಮರ ಮತ್ತು ಬಳ್ಳಿಯಂತೆ.

ರಿಪೇರಿ ಎನ್ನುವುದು ಬಸ್ಸು, ರೈಲು, ಫ್ರಿಜ್ಜು, ಕಾಲೇಜಿನಂತೆಯೇ ಕನ್ನಡೀಕರಣಗೊಂಡಿರುವ ಇಂಗ್ಲಿಷ್ ಪದ ಎನ್ನುವುದರಲ್ಲಿ ಅನುಮಾನವಿಲ್ಲ. ಹೆಸರಿನಲ್ಲಿಯೇ ಇದೆಯಲ್ಲ, pair ಎಂದರೆ ಜೋಡಿ, re-pair ಎಂದರೆ ಮರುಜೋಡಣೆ. ರಿಪೇರಿಯ ಅತ್ಯಂತ ಮೂಲಭೂತ ಅವಸ್ಥೆಯೆಂದರೆ ಒಡೆದು ಹೋಗಿರುವುದನ್ನು ಜೋಡಿಸುವುದು, ಅಷ್ಟೇ. ಯಾವುದೋ ವಸ್ತು ಮುರಿದುಹೋಯಿತು ಎಂದ ತಕ್ಷಣ ಹೊಸದನ್ನು ಕೊಂಡುತರುವುದರ ಬದಲು ಅದನ್ನೇ ಮತ್ತೆ ಜೋಡಿಸಿ ಒಂದಿಷ್ಟು ಕೊಂಕುಗಳೊಂದಿಗೆ ಮರು ಬಳಸಲು ಸಾಧ್ಯವಾದರೆ ಜೀವನದಲ್ಲಿ ನಾವು ಹೆಚ್ಚು ಸಹಿಷ್ಣುಗಳೂ, ಸಂತೋಷಿಗಳೂ, ಸಮಾಧಾನಿಗಳೂ ಆಗಿರುತ್ತೀವಂತೆ. ಹೀಗೆ ಹೇಳಿದ್ದು ನಾನಲ್ಲ, ಜಪಾನಿಗಳು. ಜಪಾನೀಯರ ಸೌಂದರ್ಯಶಾಸ್ತ್ರದಲ್ಲಿ 'ವಬಿ-ಸಬಿ' ಎನ್ನುವ ಒಂದು ಆದರ್ಶವಿದೆ. ಬೌದ್ಧಧರ್ಮದ ಅಶಾಶ್ವತತೆಯ ಬೋಧನೆಯಿಂದ ಹುಟ್ಟಿಕೊಂಡಿರುವ ಈ 'ವಬಿ-ಸಬಿ' ಜಗತ್ತಿನಲ್ಲಿ ಅಪೂರ್ಣತೆ ಮತ್ತು ಅಪರಿಪೂರ್ಣತೆಯಲ್ಲಿಯೇ ಸೌಂದರ್ಯ ಇರುವುದು ಎಂದು ಹೇಳುತ್ತದೆ. ಈ ವಬಿ-ಸಬಿಯ ಬೋಧನೆಯನ್ನು ಮಾನಸಿಕ ತಜ್ಞರೂ ಚಿಕಿತ್ಸೆಗಾಗಿ ಬಳಸಿಕೊಳ್ಳುತ್ತಾರೆ. ರಿಪೇರಿಯ ಸಾಧ್ಯತೆಯೇ ಇಲ್ಲದ

